# ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಕಾರವಾರ

ಅ.ದಾ.ನಂ. 1-2015 ಪಿ.ಡಬ್ಲ್ಯೂ: 3

ಸಾಕ್ಷಿಯ ಹೆಸರು ರಾಮನಾಥ ಕಮಲಾಕರ್ ಮೇತ್ರಿ

ಕಾರವಾರ

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ **10-02-2020.**

**ಪಾಟಿ ಸವಾಲುಃ ಶ್ರೀ ಎಂ ಎಲ್ ಎನ್ (ಹೆಚ್) ವಕೀಲರಿಂದಃ** 1 ನೇ ಪ್ರತಿವಾದಿ ಪರ

ನಾನು ವಾದಿ ನಂ 1 ಎ ಅವರ ಸಹೋದರಿಯ ಮಗ ಎಂದರೆ ಸರಿ .ನಾನು ಕಳೆದ 20 ವರ್ಷಗಳಿಂದ ಖಾಸಗಿ ಕೆಲಸ ಮಾಡುತ್ತಿದ್ದೇನೆ . ನಾನು ಕೋಡಿಭಾಗದಲ್ಲಿ ವಾಸಿಸುತ್ತೇನೆ . ಅದು ಕಾಜುಭಾಗದಿಂದ 2 ಕಿ ಮೀ ಅಂತರದಲ್ಲಿದೆ . ಆಸ್ತಿಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾನು ಯಾವತ್ತು ಹೋಗಿಲ್ಲ ಎಂದರೆ ತಂದೆಯೊಂದಿಗೆ ನಾನು ಹೋಗಿದ್ದೆ ಎಂದು ನುಡಿಯುತ್ತಾರೆ . ನಾನು ಕಾಗದ ಪತ್ರಕ್ಕೆ ಸಹಿ ಹಾಕಿಲ್ಲ ,ಆದರೆ ನನ್ನ ತಂದೆಯವರು ಸಹಿ ಹಾಕಿದ್ದಾರೆ . ಕಾಗದ ಪತ್ರವನ್ನು ಯಾರು ಬರೆದರು ಎಂದರೆ ಸುಬ್ರಾಯ ಬೇಳೂರಕರ್ ಅವರು ಬರೆದರು ಎಂದು ನುಡಿಯುತ್ತಾರೆ . ನನ್ನ ಪ್ರಕಾರ ಕಾಗದ ಪತ್ರಕ್ಕೆ ಬರೆದಿದ್ದು ಹಾಗೂ ಹಣ ನೀಡಿದ್ದು ಸುಬ್ರಾಯ ಬೇಳೂರಕರ್ ಅವರ ಮನೆಯಲ್ಲಿ ಎಂದು ನುಡಿಯುತ್ತಾರೆ . ಬಾಂಡ್ ಪೇಪರ್ ಅನ್ನು ಯಾರು ತೆಗೆದುಕೊಂಡು ಹೋಗಿದ್ದರು ಎಂದು ಸುಬ್ರಾಯ ಬೇಳೂಕರ್ ಅವರೇ ತೆಗೆದುಕೊಂಡು ಬಂದು ಬರೆದುಕೊಟ್ಟರು ಎಂದು ನುಡಿಯುತ್ತಾರೆ . ನಾನು ಆಸ್ತಿ ಮಾತುಕತೆಗೆ 3 ಬಾರಿ ಹೋಗಿದ್ದೆ . ನನ್ನ ಪ್ರಕಾರ 3 ಬಾರಿ ಹೋದಾಗ ಕರಾರು ಮಾಡಿದ್ದಾರೆ . ನನ್ನ ಪ್ರಕಾರ ಮೊದಲನೆ ಬಾರಿಗೆ ಹೋದ ವ್ಯಕ್ತಿಗಳೇ 2 ಮತ್ತು 3 ನೇ ಬಾರಿ ಹೋಗಿರುತ್ತಾರೆ . ಮೊದಲನೆಯ ಬಾರಿ ನನ್ನ ತಂದೆ , ನಾನು , ಸುಬ್ರಾಯ ಬೇಳೂರಕರ್, ಗಣಪತಿ ನಾಯ್ಕ ಹಾಗೂ ಅಶೋಕ ನಾಯ್ಕ ರವರು ಹೋಗಿದ್ದೆವು . ನನ್ನ ತಂದೆಯವರನ್ನು ಹೊರತು ಪಡಿಸಿ ಉಳಿದವರು ಜೀವಂತ ಇದ್ದಾರೆ . ಮೊದಲನೆಯ ಬಾರಿ ಹೋದಾಗ ನನ್ನ ಪ್ರಕಾರ 28,000/- ರೂ ನೀಡಿದ್ದು ಅದರ ಮುಖ ಬೆಲೆ ಹೇಳಲು ಬರುವುದಿಲ್ಲ . ಆಗ ನನಗೆ 18 ರಿಂದ 19 ವರ್ಷ ವಯಸ್ಸಾಗಿತ್ತು . ನಾನು ತಂದೆಯ ಸಂಗಡ ಹೋಗುವ ಅವಶ್ಯಕತೆ ಇರಲಿಲ್ಲ ಎಂದರೆ ದೊಡ್ಡ ಮೊತ್ತವಾದ ಕಾರಣ ಹೋಗಿದ್ದೆ ಎಂದು ನುಡಿಯುತ್ತಾರೆ . ನನ್ನ ಪ್ರಕಾರ

ಬಾರಿಯೂ ಹೋದಾಗ ಸಾಧಾರಣ 2 ಗಂಟೆ ಸುಬ್ರಾಯ ಬೇಳೂರಕರ್ ಅವರ ಮನೆಯಲ್ಲಿ ಇದ್ದೆವು. ನನ್ನ ಪ್ರಕಾರ ಕರಾರು ನನ್ನ ಎದ್ರುಗಡೆ ಕೈ ಬರಹದಲ್ಲಿ ಬರೆದರು . ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಯಾವತ್ತು ಯಾವುದೇ ಮಾತುಕತೆಗೆ ಹೋಗಿಲ್ಲ ,ನನ್ನ ಮುಂದೆ ಯಾವುದೇ ಕರಾರು ಆಗಲೀ, ಹಣದ ವಿನಿಮಯ ಆಗಲೀ ಎಂದರೆ ಸರಿಯಲ್ಲ . ವಾದಿ ನನ್ನ ಸಂಬಂಧಿಕರಾಗಿದ್ದರಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲು ಃ ಶ್ರೀ ಆರ್ ವಿ ಬಿ ವಕೀಲರಿಂದ ಃ 2 ನೇ ಪ್ರತಿವಾದಿ ಪರ**

(2 ನೇ ಪ್ರತಿವಾದಿ ಪರ ವಕೀಲರು 1 ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ )

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಪ್ರ.ಸಿವಿಲ್ ಜಡ್ಜ, ಕಾರವಾರ**